# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2274 |
| 2. ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)<br>(ಶಿಕ್ಷಕರ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | 26.03.2026 |
| 4. ಉತ್ತರಿಸುವ ಸಚಿವರು | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರ ಮತ್ತು ರಾಜ್ಯ ಪೊಲೀಸ್ ಇಲಾಖೆಯಲ್ಲಿ 31 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, 7 ವರ್ಷಗಳಿಂದ ಸಿವಿಲ್ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಎಎಸ್‌ಐ ಇಂದ ಪಿಎಸ್‌ಐ ಗೆ ಯಾವ ಕಾಲಮಿತಿಯೊಳಗೆ ಮುಂಬಡ್ತಿ ನೀಡುತ್ತೀರಿ; | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಪೊಲೀಸ್ ಆಯುಕ್ತಾಲಯ, ಬೆಂಗಳೂರು ಮತ್ತು ರೈಲ್ವೇಸ್ ಘಟಕಗಳಲ್ಲಿ ಮಾತ್ರ 21 ಪಿಎಸ್‌ಐ ಹುದ್ದೆಗಳು ರಿಕ್ತವಿರುತ್ತದೆ.<br><br>ಪೊಲೀಸ್ ಆಯುಕ್ತಾಲಯ, ಬೆಂಗಳೂರು ಘಟಕದಲ್ಲಿ ರಿಕ್ತವಿರುವ 19 ಪಿಎಸ್‌ಐ ಹುದ್ದೆಗಳಿಗೆ ಅರ್ಹ ಎಎಸ್‌ಐಗಳಿಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ರೈಲ್ವೇಸ್ ಘಟಕದಲ್ಲಿ ರಿಕ್ತವಿರುವ 02 ಪಿಎಸ್‌ಐ ಹುದ್ದೆಗಳಿಗೆ ಮುಂಬಡ್ತಿ ನೀಡಲು ಅರ್ಹ ಎಎಸ್‌ಐ ಗಳು ಲಭ್ಯವಿರುವುದಿಲ್ಲ. |
| ಆ | ರಾಜ್ಯದಲ್ಲಿ ಬೇರೆ ಬೇರೆ ಸರ್ಕಾರಿ ಇಲಾಖೆಯಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳು ಶೇಕಡ 50/50ರಷ್ಟು ಇದ್ದು, ಪೊಲೀಸ್ ಇಲಾಖೆಯಲ್ಲಿ ಮಾತ್ರ 70/30 ರಷ್ಟಿರುತ್ತದೆ. ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರದಿಂದ ಸಾಧ್ಯವಿಲ್ಲವೆ ಅಥವಾ ಯಾವ ಕಾಲಮಿತಿಯೊಳಗೆ ಈ ತಾರತಮ್ಯವನ್ನು ಸರಿಪಡಿಸಲಾಗುವುದು; | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪಿಎಸ್‌ಐ ಹುದ್ದೆಗೆ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ಶೇಕಡಾ 70:30ರ ಅನುಪಾತವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಅನುಪಾತ ನಿಗಧಿಯು ಇಲಾಖೆಯ ಕಾರ್ಯನಿರ್ವಹಣೆ ಮತ್ತು ಆಡಳಿತಕ್ಕೆ ಪೂರಕವಾಗಿದ್ದು, ಸದರಿ ಅನುಪಾತ ಬದಲಾವಣೆಯ ಸಂಬಂಧ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಇ | ಬೆಂಗಳೂರು ನಗರದ ಆಯುಕ್ತರ ಕಛೇರಿಗೆ ರೈಲ್ವೇ ಪೊಲೀಸ್ ಮತ್ತು ವಿವಿಧ ಘಟಕಗಳಿಂದ 1999ನೇ ಸಾಲಿನಲ್ಲಿ ನೇಮಕಾತಿ ಹೊಂದಿ ನಗರಕ್ಕೆ ವರ್ಗಾವಣೆಯಾಗಿ ಬಂದು 1996ರಲ್ಲಿ ನೇಮಕಾತಿ ಹೊಂದಿ ಬೆಂಗಳೂರು ನಗರದ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಎಸ್‌ಐ ಗಳ ಜೇಷ್ಠತಾ ಪಟ್ಟಿಯಲ್ಲಿ ಮುಂದೆ ಇದ್ದು ಇನ್ನು ಕೆಲವರು ಪಿಎಸ್‌ಐ ಆಗಿ ಮುಂಬಡ್ತಿ ಹೊಂದಿದ್ದು, ಯಾವ ಆದೇಶದಂತೆ ಮುಂಬಡ್ತಿ ನೀಡಲಾಗಿದೆ; ಈ ವಿಷಯ ಸರ್ಕಾರ ಮತ್ತು ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದಿದೆಯೇ; | ರೈಲ್ವೆ ಘಟಕ ಮತ್ತು ವಿವಿಧ ಘಟಕಗಳಿಂದ ಸೇವಾ ಜೇಷ್ಠತೆಯನ್ನು ಬಿಟ್ಟುಕೊಡುವ ಷರತ್ತಿಗೊಳಪಟ್ಟು ಪಿಸಿ/ಹೆಚ್‌ಸಿ/ಎಎಸ್‌ಐ ವೃಂದದ ಅಧಿಕಾರಿ/ಸಿಬ್ಬಂದಿಗಳು ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ವರ್ಗಾವಣೆಗೊಂಡು ಬಂದು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br><br>ಈ ರೀತಿ ವರ್ಗಾವಣೆಯಾಗಿ ಬಂದ ಅಧಿಕಾರಿ/ಸಿಬ್ಬಂದಿಗಳ ಸೇವಾ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ ನಿಯಮಗಳು) 1957ರ ನಿಯಮ 6 ಮತ್ತು ಸರ್ಕಾರದ ಆದೇಶ ಸಂ: ಒಇ/93/ಪಿಪಿಎಸ್/2022 ಬೆಂಗಳೂರು ದಿನಾಂಕ: 15.07.2024ರ ಗಳನ್ವಯ ಬೆಂಗಳೂರು ನಗರ ಘಟಕದಲ್ಲಿನ (ವರ್ಗಾವಣೆಗೊಂಡ ಘಟಕದಲ್ಲಿನ) ಸಂಬಂಧಪಟ್ಟ ಕೇಡರ್‌ನ ಕೊನೆಯವರಾಗಿ ಪರಿಗಣಿಸಿ, ಜೇಷ್ಠತೆಯನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಜೇಷ್ಠತೆಯನ್ವಯ ಮುಂಬಡ್ತಿಗೆ ಪರಿಗಣಿಸಲಾಗಿರುತ್ತದೆ. |

| | | |
|---|---|---|
| | | ಬೇರೆ ಘಟಕಗಳಿಂದ ಸ್ವಂತ ಕೋರಿಕೆ ಮೇರೆಗೆ ಸೇವಾ ಜೇಷ್ಠತೆಯನ್ನು ಬಿಟ್ಟುಕೊಡುವ ಷರತ್ತಿಗೊಳಪಟ್ಟು ವರ್ಗಾವಣೆಯಾಗಿ ಬೆಂಗಳೂರು ನಗರ ಘಟಕದಲ್ಲಿ ವರದಿ ಮಾಡಿರುವ ಎ.ಎಸ್.ಐ ರವರುಗಳು ಮಾತ್ರ ಘಟಕದಲ್ಲಿ 1996ನೇ ಸಾಲಿನಲ್ಲಿ ಸಿಪಿಸಿ ಹುದ್ದೆಗೆ ನೇಮಕಾತಿ ಹೊಂದಿದ್ದು 2015ನೇ ಸಾಲಿನಲ್ಲಿ ಎ.ಎಸ್.ಐ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ. ತದನಂತರ ಸಿಓಪಿ ಘಟಕಕ್ಕೆ ವರ್ಗಾವಣೆಯಾಗಿ ಬಂದಿದ್ದು, ಸದರಿಯವರು ಬೆಂಗಳೂರು ನಗರ ಘಟಕದ ಎಎಸ್ಐ ಹುದ್ದೆಗೆ ವರದಿಮಾಡಿದ ದಿನಾಂಕವನ್ನು ಪರಿಗಣಿಸಿ ಬೆಂಗಳೂರು ನಗರ ಘಟಕದಲ್ಲಿನ ಎ.ಎಸ್.ಐ ವೃಂದದ ಕೊನೆಯವರಾಗಿ ಜೇಷ್ಠತೆಯನ್ನು ನಿಗದಿಪಡಿಸಲಾಗಿರುತ್ತದೆ. ಅವರುಗಳಿಗೆ 2021ನೇ ಸಾಲಿನಲ್ಲಿ ಪಿಎಸ್ಐ ಹುದ್ದೆಗೆ ಜೇಷ್ಠತೆಯನುಸಾರ ಮುಂಬಡ್ತಿ ನೀಡಲಾಗಿರುತ್ತದೆ.<br><br>ಆದರೆ, ಬೆಂಗಳೂರು ನಗರ ಘಟಕಕ್ಕೆ 1996ನೇ ಸಾಲಿನಲ್ಲಿ ಸಿಪಿಸಿ ಹುದ್ದೆಗೆ ನೇಮಕಾತಿ ಹೊಂದಿದ ಸಿಬ್ಬಂದಿಗಳು 2019ನೇ ಸಾಲಿನಲ್ಲಿ ಎ.ಎಸ್.ಐ ಹುದ್ದೆಗೆ ಮುಂಬಡ್ತಿ ಹೊಂದಿದ್ದು, 2023ನೇ ಸಾಲಿನಿಂದ ಪಿ.ಎಸ್.ಐ ಹುದ್ದೆಗೆ ಜೇಷ್ಠತಾನುಸಾರ ಪರಿಗಣಿಸಲಾಗಿರುತ್ತದೆ.<br><br>ಪ್ರಸ್ತುತ ಬೆಂಗಳೂರು ನಗರ ಘಟಕದಲ್ಲಿ 1996ನೇ ಸಾಲಿನಲ್ಲಿ ಸಿಪಿಸಿ ಹುದ್ದೆಗೆ ನೇಮಕಾತಿ ಹೊಂದಿ 2013ನೇ ಸಾಲಿನಲ್ಲಿ ಹೆಚ್.ಸಿ ಹುದ್ದೆಗೆ ಮತ್ತು 2020ನೇ ಸಾಲಿನಲ್ಲಿ ಎ.ಎಸ್.ಐ ಹುದ್ದೆಗೆ ಮುಂಬಡ್ತಿ ಹೊಂದಿರುವ ಸಿಬ್ಬಂದಿಗಳನ್ನು ಪಿ.ಎಸ್.ಐ ಹುದ್ದೆಯ ಮುಂಬಡ್ತಿಗೆ ಪರಿಗಣಿಸಲಾಗುತ್ತಿರುತ್ತದೆ. |
| ಈ | ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ ಎಎಸ್ಐ ಗಳು ಪ್ರತಿನಿತ್ಯ 12 ರಿಂದ 18 ಗಂಟೆಗಳ ವರಗೆ ಕರ್ತವ್ಯ ನಿರ್ವಹಿಸುತ್ತಿದ್ದು ಇವರಿಗೆ ವಾರದ ರಜೆ ಇಲ್ಲವೇ? (ಪೂರ್ಣ ಮಾಹಿತಿಯನ್ನು ಒದಗಿಸುವುದು) | ಪೊಲೀಸ್ ಮ್ಯಾನ್ಯುಯಲ್‌ನ ಆದೇಶದನ್ವಯ ಸಿಬ್ಬಂದಿಗಳನ್ನು 08 ಗಂಟೆಗಳ 03 ಪಾಳಿಗಳಲ್ಲಿ ಕರ್ತವ್ಯವನ್ನು ನಿರ್ವಹಿಸಲು ನಿಯೋಜಿಸಲಾಗುತ್ತಿದೆ. ಠಾಣೆಗಳ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ನಿರ್ವಹಣೆ, ಬಂದೋಬಸ್ತ್ ಕರ್ತವ್ಯ ಇತ್ಯಾದಿ ಕರ್ತವ್ಯದ ಒತ್ತಡದ ಕೆಲವು ಸಂದರ್ಭಗಳಲ್ಲಿ ಆಯಾ ಠಾಣಾಧಿಕಾರಿಗಳ ವತಿಯಿಂದ ಅವಶ್ಯಕತೆಗನುಗುಣವಾಗಿ ಸಿಬ್ಬಂದಿಗಳನ್ನು ಸೀಮಿತ ಅವಧಿಗೆ 02 ಪಾಳಿಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ.<br><br>ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್‌ಸಿ ಮತ್ತು ಪಿಸಿ ರವರಿಗೆ ಕಡ್ಡಾಯವಾಗಿ ವಾರದ ರಜೆಯನ್ನು ನೀಡಲು ಪ್ರಧಾನ ಕಛೇರಿಯ ಸುತ್ತೋಲೆ ಸಂಖ್ಯೆ:ಆರ್‌ಎಲ್‌ಎನ್(1)/14/2021 ದಿನಾಂಕ:03.08.2021ರಲ್ಲಿ ಎಲ್ಲಾ ಘಟಕಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದ್ದು, ಪ್ರಸ್ತುತ ಎಎಸ್ಐ ವೃಂದದ ಸಿಬ್ಬಂದಿಗಳಿಗೆ ವಾರದ ರಜೆಯನ್ನು ನೀಡಲಾಗುತ್ತಿರುವುದಿಲ್ಲ. |

ಸಂಖ್ಯೆ: ಒಇ 94 ಪಿಇಐ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು